






ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಲೇಖಕ

ಆಯ್ದುಕೊಳ್ಳಲಾಯಿತು. ತತ್ಪರಿಣಾಮವಾಗಿ ತಮ್ಮ ಸ್ವರೂಪವನ್ನು ಸಂಪೂರ್ಣ ಬದಲಿಸಿಕೊಂಡ ವಿಮಾನ ನಿಲ್ದಾಣಗಳು ವೈಭವದ ತಾಣಗಳಾದವು. ಈಗ ನೀವು ಯಾವುದಾರೂ ವಿಮಾನ ನಿಲ್ದಾಣದ ಒಳಗೆ ಹೋದರೆ ಅದೊಂದು ದೊಡ್ಡ ಮಾಲ್‌ನಲ್ಲಿ ತಿರುಗಾಡಿದ ಅನುಭವವಾಗುತ್ತದೆ.

ಹಲವು ಹಳೆಯ ವಿಮಾನ ನಿಲ್ದಾಣಗಳು ನವೀಕರಣಗೊಂಡರೆ, ಇನ್ನು ಹಲವೆಡೆ ಬೃಹದಾಕಾರದ ವಿಶಿಷ್ಟ ವಿನ್ಯಾಸದ ಹೊಸ ನಿಲ್ದಾಣಗಳು ನಿರ್ಮಾಣಗೊಂಡವು. ಈ ನವ ನಿಲ್ದಾಣಗಳ ವೈಭವದ ಅನಾವರಣವು ಪ್ರವೇಶ ದ್ವಾರದಿಂದಲೇ ಪ್ರಾರಂಭವಾಗುತ್ತದೆ. ಎತ್ತರದ ಆಕರ್ಷಕ ಛಾವಣಿ; ಕಣ್ಣು ಹಾಯಿಸಿದಷ್ಟು ದೂರದವರೆಗೂ ವಿಸ್ತರಿಸಿರುವ ವಿಶಾಲ ಹಜಾರ; ಫಳಫಳ ಹೊಳೆಯುವ ಗ್ರಾನೈಟ್ ಹಾಸುಗಳು; ಸಾಲು ಸಾಲು ಆರಾಮ ಆಸನಗಳು; ದೂರದಿಂದಲೇ ಕಾಣುವ ಮಾರ್ಗದರ್ಶಕ ಫಲಕಗಳು; ಚೆಕ್-ಇನ್ ಕೌಂಟರುಗಳು ನಿಮ್ಮನ್ನು ಸ್ವಾಗತಿಸುತ್ತವೆ.

ಬೋರ್ಡಿಂಗ್ ಪಾಸ್ ಪಡೆದು ಸುರಕ್ಷಾ ತಪಾಸಣೆ ಮುಗಿಸಿ ಮುಖ್ಯ ಹಜಾರ ಹೊಕ್ಕರೆ ಭ್ರಮಾಲೋಕದ ಸಾಕ್ಷಾತ್ಕಾರವಾಗುತ್ತದೆ! ವಿವಿಧ ಅಂತಸ್ತುಗಳಿಗೆ ತಲುಪಿಸಲು ಸೋಪಾನಗಳ ಜೊತೆ ಜೊತೆಗೆ ಎಸ್ಕಲೇಟರ್ ಮತ್ತು ಲಿಫ್ಟ್‌ಗಳಿದ್ದು ಹತ್ತಿಳಿಯುವ ಕಷ್ಟವನ್ನು ನಿವಾರಿಸುತ್ತವೆ. ಓರಣವಾಗಿ ಜೋಡಿಸಿಟ್ಟಿರುವ ಹಲವಾರು ದೈನಿಕಗಳು ವರ್ತಮಾನಾಸಕ್ತರನ್ನು ಬರಮಾಡಿಕೊಳ್ಳುತ್ತವೆ. ಓದುವ ಶ್ರಮ ಬೇಡ ಎನ್ನುವವರನ್ನು ವಿಶಾಲ ಪರದೆಯ ಟೀವಿಗಳು ಕೈಬೀಸಿ ಕರೆಯುತ್ತವೆ. ಅವುಗಳ ಮುಂದೆ ಆರಾಮಾಸನಗಳಲ್ಲಿ ಕುಳಿತು ಸುದ್ದಿ ತಿಳಿದುಕೊಳ್ಳುವುದರ ಜೊತೆ ಜೊತೆಗೇ, ಎದುರಿಗೇ ಸಿಗುವ ರೆಸ್ಟುರಾಗಳಿಂದ ಕೊಂಡುತಂದ ಪ್ರಿಯವಾದ ಖಾದ್ಯ-ಪೇಯಗಳನ್ನೂ ಸವಿಯಬಹುದು.

ಬಹುತೇಕ ಪ್ರಯಾಣಿಕರಿಗೆ ತಮ್ಮ ಶಕ್ತಿವರ್ಧನೆಗಿಂತ ಅವಿಭಾಜ್ಯ ಸಂಗಾತಿಗಳಾದ ಲ್ಯಾಪ್ ಟಾಪ್ ಮತ್ತು ಮೊಬೈಲ್‌ಗಳ ಚಾರ್ಜ್ ಕಾಪಾಡಿಕೊಳ್ಳುವುದೇ ಪ್ರಮುಖವಾಗುತ್ತದೆ. ಈ ಅಗತ್ಯವನ್ನು ಮನಗಂಡು ಇದರ ಪೂರೈಕೆಗೆಂದೇ ಚಾರ್ಜಿಂಗ್ ಸ್ಟೇಷನ್‌ಗಳನ್ನು ನಿರ್ಮಿಸಿದ್ದಾರೆ.

ಇದಾವುದರ ಉಸಾಬರಿಯಿಲ್ಲದೆ ಕಾಲಹರಣ ಮಾಡಬೇಕೆಂದರೆ ಸರ್ವವ್ಯಾಪಿ ಮತ್ತು ಚಿತ್ತಾಕರ್ಷಕ ಜಾಹಿರಾತುಗಳ ಮೊರೆಹೋಗಬಹುದು. ಪ್ರಯಾಣಿಕರನ್ನು ಸೆಳೆದು, ಅವರಿಗೆ ತಮ್ಮ ಸರಕು -ಸೇವೆಗಳನ್ನು ಪರಿಚಯಿಸಿ, ಅವರನ್ನು ಗ್ರಾಹಕರನ್ನಾಗಿ ಪರಿವರ್ತಿಸಲು ವಿಶೇಷವಾಗಿ ಸ್ಥಾಪಿಸಲ್ಪಟ್ಟಿರುವ ಮಳಿಗೆಗಳಿಗೆ ಭೇಟಿ ನೀಡಬಹುದು. ಆಟಿಕೆಗಳು, ಕರಕುಶಲ ವಸ್ತುಗಳು, ಪುಸ್ತಕ, ಆಭರಣ, ಉಡುಪು, ಪ್ರಯಾಣದ ಅಗತ್ಯಗಳು, ವ್ಯಾನಿಟಿ ಬ್ಯಾಗ್, ಗಡಿಯಾರ, ತಿಂಡಿ-ತಿನಿಸು, ಚಾಕೊಲೆಟ್, ಉಡುಪು, ಪಾದರಕ್ಷೆ, ಎಲೆಕ್ಟ್ರಾನಿಕ್ಸ್ — ಹೀಗೆ ಹತ್ತು ಹಲವು ಸರಕುಗಳನ್ನು ವಿಕ್ರಯಿಸುವ ಅಂಗಡಿಗಳನ್ನು ಸುತ್ತಿ ಕಣ್ತುಂಬಿಕೊಳ್ಳಬಹುದು.

ಸ್ವಂತ ಬಳಕೆಗಾಗಿ ಅಥವ ಪ್ರೀತಿಪಾತ್ರರಿಗೆ ಉಡುಗೊರೆ ನೀಡಲೋಸುಗ ಅಪೇಕ್ಷಿತ ವಸ್ತುಗಳನ್ನು ಕೊಂಡುಕೊಳ್ಳಲೂ ಬಹುದು. ಅದಕ್ಕಾಗಿ ಜೇಬಿನಲ್ಲಿ ನಗದು ಇಲ್ಲವೆಂದು ಚಿಂತಿಸಬೇಕಿಲ್ಲ! ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ಇ-ವ್ಯಾಲೆಟ್ ಇತ್ಯಾದಿಗಳಲ್ಲಿ ಯಾವುದಾದರೊಂದು ಇದ್ದರೂ ಸಾಕು.

ಸುತ್ತಾಡಿ ಸುಸ್ತಾದರೆ ಸುಧಾರಿಸಿಕೊಳ್ಳಲು ಮೆತ್ತನೆಯ ಮೆತ್ತೆಯತ್ತ ಚಿತ್ತೈಸಬಹುದು! ವಿರಮಿಸಿಕೊಂಡ ನಂತರ ಶೌಚಾಲಯಕ್ಕೆ ತೆರಳಿದರೆ ಅದೂ ಸಹ ಸ್ವಚ್ಛತೆಯಿಂದಿದ್ದು ಅಚ್ಚರಿ ಮೂಡಿಸುತ್ತದೆ. ಮಹಿಳೆಯರ ಮತ್ತು ಪುರುಷರ ಶೌಚಾಲಯಗಳನ್ನು ಸುಲಭವಾಗಿ ಗುರುತಿಸಲು ನೆರವಾಗುವಲ್ಲಿ ಬಳಸಿಕೊಂಡಿರುವ ದೊಡ್ಡ ಭಿತ್ತಿಚಿತ್ರಗಳು ಕಲಾತ್ಮಕ ಹಾಗು ಸೃಜನಶೀಲವಾಗಿದ್ದು ಪ್ರಶಂಸಾರ್ಹವಾಗಿವೆ.

ಕ್ರಿಸ್‌ಮಸ್ ಹಬ್ಬದಂತಹ ವಿಶೇಷ ಸಂದರ್ಭಗಳಲ್ಲಂತೂ ಇಲ್ಲಿ ಸ್ವರ್ಗವೇ ಸೃಷ್ಟಿಗೊಂಡು ಪ್ರಯಾಣಿಕರನ್ನು ಭ್ರಮಾಲೋಕಕ್ಕೆ ಕೊಂಡೊಯ್ಯುತ್ತದೆ. ಬಹುಮಾನಗಳನ್ನು ಪಡೆದ ಅದೃಷ್ಟಶಾಲಿ ಪಯಣಿಗರು ಹೆಮ್ಮೆಯಿಂದ ಸಂಭ್ರಮದ ಪರಾಕಾಷ್ಠೆಯಲ್ಲಿದ್ದರೆ ಅದು ಸಹಜವಷ್ಟೆ? ಐದು ಹೊತ್ತು ನಮಾಜ್ ಮಾಡುವವರಿಗೆ ಎಲ್ಲ ವಿಮಾನ ನಿಲ್ದಾಣಗಳಲ್ಲೂ ಪುಟ್ಟದೊಂದು ಪ್ರಾರ್ಥನಾ ಹಾಲ್, ಅದಕ್ಕೆ ಹೊಂದಿಕೊಂಡು ನೀರಿನ ವ್ಯವಸ್ಥೆಯೂ ಇದೆ.

ಈ ಮಧ್ಯೆ ಐಷಾರಾಮ ಬೇಕೆಂದರೆ ಅದಕ್ಕೂ ಬಹುರಾಷ್ಟ್ರೀಯ ಕಂಪೆನಿಗಳ ಲಾಂಜ್‌ಗಳಿವೆ. ಈ ಲಾಂಜ್‌ಗೆ ಪ್ರತ್ಯೇಕ ಶುಲ್ಕವಿದೆ. ಅದನ್ನು ಪಾವತಿಸಿದರೆ, ಅಲ್ಲಿ ನೀವು ಸ್ನಾನ ಮಾಡಬಹುದು, ಮಸಾಜ್ ಮಾಡಿಸಿಕೊಳ್ಳಬಹುದು, ನಿದ್ರೆ ಮಾಡಬಹುದು, ಜತೆಗೆ ತಿಂಡಿ- ಊಟ ಮಾಡಬಹುದು. ಲ್ಯಾಪ್‌ಟಾಪ್ ತೆಗೆದು ಕಚೇರಿಯ ಕೆಲಸ ಮಾಡಬೇಕೆಂದರೆ ಇಂಟರ್‌ನೆಟ್ ಸೌಲಭ್ಯವಿದೆ. ಜತೆಗೆ ತುರ್ತಾಗಿ ಕಂಪೆನಿಯ ಸಣ್ಣ ಮೀಟಿಂಗ್ ಮಾಡಬೇಕೆಂದರೂ ಅಲ್ಲಿ ಸ್ಥಳ ಸಿಗುತ್ತದೆ!

ಪಯಣ ಪೂರೈಸಿ ಹೊರಬರುವ ಮುನ್ನ ಚೆಕ್ಡ್- ಇನ್ ಬ್ಯಾಗೇಜ್‌ಗಾಗಿ ಕಾಯಬೇಕಾದ ಸಂದರ್ಭದಲ್ಲೂ ನಿಮ್ಮ ಮನಸ್ಸು ಕನ್ವೇಯರ್ ಬೆಲ್ಟ್‌ನ ನಡುವಿನಲ್ಲಿ ಅಂದವಾಗಿ ಜೋಡಿಸಿರುವ ವರ್ಣಮಯ ಪುಷ್ಪಗಳಂತೆ, ಅರಳಿರುತ್ತದೆ.

ಈಗ ವಿಮಾನ ನಿಲ್ದಾಣಗಳೆಂದರೆ ಕೇವಲ ಪಯಣ ಹೊರಡುವ ತಾಣಗಳಲ್ಲ, ಐಶಾರಾಮದ ಅನುಭವ ನೀಡುವ ದೊಡ್ಡ ಮಾಲ್‌ಗಳಂತೆ. ●